ಶ್ರೀ ಕೆ. ವಿ. ಬೈರೇಗೌಡ.—ಟ್ರಸ್ಟ್ ಬೋರ್ಡ್‌ಲೇ ಔಟ್ ಮಾಡಿರುವ ಜಾಗಗಳು ಬೆಂಗಳೂರು ಕಾರ್ಪೋರೇಷನ್ ಒಳಗಡೆ ಇರುವುವು ಎಷ್ಟು? ಕಾರ್ಪೋರೇಷನ್ ಹೊರಗಡೆ ಇರುವ ಲೇ ಔಟ್ ಎಷ್ಟು?

*ಶ್ರೀ ಆರ್. ಚೆನ್ನಿಗರಾಮಯ್ಯ.—ಅದರ ಡೀಟೈಲ್ಸ್ ಇಲ್ಲ.

ಶ್ರೀ ಕೆ. ವಿ. ಬೈರೇಗೌಡ.—ತಾವು ಲೇ ಔಟ್ ಮಾಡುವಾಗ ಎಷ್ಟು ರೆವಿನ್ಯೂ ಪಾರ್ಕೆಟ್‌ಗಳು ಇವೆಯೆಂಬುದನ್ನು ಸರ್ವೆ ಮಾಡಿಸಿದ್ದೀರಾ?

ಶ್ರೀ ಆರ್. ಚೆನ್ನಿಗರಾಮಯ್ಯ.—ರೆವಿನ್ಯೂ ಪಾರ್ಕೆಟ್ಸ್‌ಗಳು ಇವೆ.

ಶ್ರೀ ಕೆ. ವಿ. ಬೈರೇಗೌಡ.—ಎಷ್ಟು ಎಕರೆ ಇದೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ತಪಶೀಲು ಇಲ್ಲ, ನೋಟೀಸ್ ಬೇಕು.

ಶ್ರೀ ಕೆ. ವಿ. ಬೈರೇಗೌಡ.—500 ಎಕರೆಗೆ ಮೇಲ್ಪಟ್ಟು ಕಾರ್ಪೋರೇಷನ್ ಒಳಗಡೆಯೇ ಇರುವಾಗ ಹೊರಗಡೆ ಎಷ್ಟಕ್ಕೆ ಲೇ ಔಟ್ ಮಾಡಿದರು?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದು ಪಾಲಸಿ ಪ್ರಶ್ನೆ. ಟ್ರಸ್ಟ್ ಬೋರ್ಡ್ ಯಾವ ಯಾವುದನ್ನು ಅಕ್ವೈರ್ ಮಾಡಿದರು ಎಂಬುದಕ್ಕೆ ಡೀಟೈಲ್ಸ್ ಇವೆ ರೆವಿನ್ಯೂ ಲ್ಯಾಂಡ್ ವಿಚಾರ ಇಲ್ಲ.

ಶ್ರೀ ಕೆ. ವಿ. ಬೈರೇಗೌಡ.—ಟ್ರಸ್ಟ್‌ಬೋರ್ಡ್‌ಲೇ ಔಟ್ ಎಲ್ಲವೂ ಬಿಕರಿಯಾಗಿ ಸರ್ಕಾರಕ್ಕೆ ಬರಬೇಕಾದ ಮೊಬಲಗು ಬಂದಿದೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇನ್ನೂ ಬರಬೇಕಾದ್ದು ಇದೆ.

Sri K. HANUMANTHAIYA.—May I know from the Hon'ble Minister with reference to items 1 and 2 in the Statement B where the expenditure for Jayanagar Extension is nearly one crore of rupees and for Rajajinagar nearly Rs. 44 lakhs, the realisations therefrom have not been commensurate?

Sri R. CHENNIGARAMIAH.—Because we have got a number of sites still to be disposed of.

Sri K. HANUMANTHAIYA.—May I know what percentage of sites are still unsold?

Sri R. CHENNIGARAMIAH.—In Jayanagar, we have got still about 900 sites to be disposed of and expect to realise Rs. 60,000 and then in Rajajinagar we have got still about 89 sites to be disposed of.

Sri K. HANUMANTHAIYA.—In item No. 11, with regard to Wilson Garden Extension, the amount expended for acquisition charges has not been given. May I know why?

Sri R. CHENNIGARAMIAH.—It is about Rs. 60,681.

ಶ್ರೀ ಕೆ. ವಿ. ಬೈರೇಗೌಡ.—ಟ್ರಸ್ಟ್ ಬೋರ್ಡ್‌ಲೇ ಔಟ್ ಮಾಡಬಹುದು ಎಂದು ಇರುವುದರಿಂದ, ಕಾರ್ಪೋರೇಷನ್ ವೈಟ್‌ನೆನ್ನಿಗೇ ಧಕ್ಕೆ ಬಂದ ಹಾಗಾಗುವುದಿಲ್ಲವೇ? ಆ ಟ್ರಸ್ಟ್‌ಬೋರ್ಡಿನವರು ಸೈಟುಗಳನ್ನು ಬಿಕರಿಮಾಡಿ ಹೋಗುತ್ತಿದ್ದರೆ ಅವು ಕಾರ್ಪೋರೇಷನ್ ವಶಕ್ಕೆ ತಗೆದುಕೊಂಡಾಗ ಅವರಿಗೆ ಖರ್ಚು ಹೆಚ್ಚಾಗುವುದಿಲ್ಲವೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇಲ್ಲ.

Dislocation of Transportation in Hosadurga Taluk.

Q.—370. **Sri B. S. SHANKARAPPA** (Hosadurga).—

Will the Government be pleased to state:—

(*a*) whether it has come to their notice that as a result of the Bagurkere Kodihalla flowing across the Hosadurga-Hosadurga Railway Station (*via* Bagur) Road, the latter has been washed away, thereby making communication impossible in Hosadurga Taluk;

(*b*) if so, whether they have taken any action in this regard;

(*c*) if not, when they would take suitable action for restoration of communication therein?

A.—**Sri R. CHENNIGARAMIAH** (Minister for Local Self-Government).—

(*a*) The traffic had been dislocated temporarily.

(*b*) Immediate action has been taken to restore the road for normal traffic.

(*c*) Does not arise in view of reply to (*b*).

ಶ್ರೀ ಬಿ. ಎಸ್. ಶಂಕರಪ್ಪ.—(*b*)ಗೆ ಉತ್ತರವಾಗಿ ಮೊದಲನಂತೆ ರಸ್ತೆಯನ್ನು ಸಂಚಾರ ಯೋಗ್ಯವಾದುದನ್ನಾಗಿ ಮಾಡುವ ಸಂಬಂಧದಲ್ಲಿ ತಕ್ಷಣ ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ಹೇಳಿದ್ದೀರಿ, ಇದು ಶಾಶ್ವತವಾಗಿರುತ್ತದೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇರುವವರೆಗೆ ಇರುತ್ತದೆ. ಆಮೇಲೆ ಬೇರೆ ಮಾಡಬೆ ಕಾಗುತ್ತದೆ.

ಶ್ರೀ ಬಿ. ಎಸ್. ಶಂಕರಪ್ಪ.—ಕೆರೆಯ ಕೋಡಿಯನ್ನು ರಿಪೇರಿಮಾಡುವುದಿಲ್ಲವೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ರೋಡು ಸಂಚಾರಕ್ಕೆ ಅನುಕೂಲವಾಗುವಹಾಗೆ ಮಾಡಿದೆ. ಪಕ್ಕಾ ಏರ್ಪಾಟು ಆಮೇಲೆ ಮಾಡಬಾಗುತ್ತದೆ. ಈಗ ಬಿಡ್ಜ್ ಹಾಕಿದ್ದು ವಾಷ್ ಔಟ್ ಆಗಿ ತೊಂದರೆಯಾಗಿದೆ. ತಕ್ಷಣದ ಏರ್ಪಾಡುಮಾಡಿದ್ದೇವೆ. ಈಗ 9 637 ರೂಪಾಯಿಗಳ ಅಂದಾಜು ಈ ವಿಚಾರದಲ್ಲಿ ತಯಾರಾಗಿದೆ. ಪಕ್ಕ ಕೆಲಸ ಮಾಡಬಾಗುತ್ತದೆ.

ಶ್ರೀ ಬಿ. ಎಸ್. ಶಂಕರಪ್ಪ.—ಈ ವರ್ಷ ಎಸ್ಟಿಮೇಟ್‌ನಂತೆ ಕಲಸ ಮಾಡಲಾಗುತ್ತದೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಈಗಾಗಲೇ 1,510 ರೂಪಾಯಿಗಳು ಖರ್ಚಾಗಿವೆ. ಇದನ್ನು ಮುಂದುವರಿಸಿ ಪೂರಾ ಮಾಡಲಾಗುತ್ತದೆ.

Jodi Villages for Government Management.

Q.—388. Sri G. N. PUTTANNA (Tumkur).—

Will the Government be pleased to state:—

(*a*) whether they are insisting upon the jodidars in the State to furnish accounts Nos. 14 and 15 as per rule 6 of the Mysore Land Revenue Rules;

(*b*) whether they propose to take over the management of all the jodi villages immediately?

A.—Sri M. P. PATIL (Minister for Reveune).—

(*a*) Yes.

(*b*) This is not possible as inam villages can be taken over under Government management only if provisions of Land Revenue Code are satisfied. However in view of the promulgation of the Mysore Inam Abolition Acts even this question does not arise as these villages vest in Government as and when they are notified under these Acts.

ಶ್ರೀ ಜಿ. ಎಸ್. ಪುಟ್ಟಣ್ಣ.—ಸರ್ಕಾರದವರಿಗೆ ಜೋಡಿದಾರರು 14-15ನೆಯ ನಂಬರಿನಂತೆ ಲೆಕ್ಕ ಕೊಡಬೇಕೆಂದು insist ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಆ ರೀತಿ ಕೊಟ್ಟಿಲ್ಲ ಎಂಬುದು ತಮಗೆ ಗೊತ್ತಿದೆಯೇ?

Sri M. P. PATIL.—In some cases they had not given the accounts. In those cases a special staff was appointed and the accounts were got written by them and expenses incurred in that connection were recovered from the jodidars.

ಶ್ರೀ ಜಿ. ಎಸ್. ಪುಟ್ಟಣ್ಣ.—ಈ ಲೆಕ್ಕ ಬರೆಯುತ್ತಿರುವುದು ಎಷ್ಟು ವರ್ಷದಿಂದೀಚೆಗೆ? ಈ ವರ್ಷಕ್ಕೇ? ಹಿಂದಿನ ವರ್ಷಕ್ಕೇ?

ಶ್ರೀ ಎಂ. ಪಿ. ಪಾಟೀಲ್.—ಆ ಸಮಾಚಾರ ನನ್ನಹತ್ತಿರ ಇಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಆ ರೀತಿ ಜೋಡಿದಾರರು ಲೆಕ್ಕ ಕೊಡದೆ ಇದ್ದು, ಇನ್ನಾಂದಾರರು ಬೇರೆ ಬೇರೆ ರೈತರ ಹೆಸರನ್ನು ಬರೆಯುತ್ತಿದ್ದಾರೆಂದು ಗೊತ್ತಿದೆಯೇ. ನರಿಯಾಗಿ ಲೆಕ್ಕ ಕೊಡದೆ ಇದ್ದರೆ ಏನು ಮಾಡುತ್ತೀರಿ?

ಶ್ರೀ ಎಂ. ಪಿ. ಪಾಟೀಲ್.—ಲೆಕ್ಕಗಳ ಬಗ್ಗೆ ಹೇಳಿದ್ದೇನೆ. ರೂಲ್ ಪ್ರಕಾರ ಲೆಕ್ಕ ಕೊಡಬೇಕೆಂದಿದೆ. ಆ ರೀತಿ ಕೊಡದೆ ಇದ್ದರೆ ಸ್ಪೆಷಲ್ ಸ್ಟಾಫ್ ನೇಮಿಸಿ ಅವರಿಂದ ಲೆಕ್ಕ ಬರೆಸಿಕೊಳ್ಳುತ್ತಾರೆ. ಜೋಡಿದಾರರ ಮತ್ತು ರೈತರುಗಳ ಹಕ್ಕು ಏನಿದೆಯೋ ಅದನ್ನು ವಿಚಾರ ಮಾಡುತ್ತಾರೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಲೆಕ್ಕ ಬರೆಯುವ ಕಾಲದಲ್ಲಿ, ಸ್ಪೆಷಲ್ ಸ್ಟಾಫ್‌ನವರು 14-15ನೆಯ ದಾಖಲೆಯಮೇರೆ ರೈತರ ಹಕ್ಕನ್ನು ಬರೆಯದೆ ತಿರಸ್ಕರಿಸುವುದು ತಮಗೆ ಗೊತ್ತಿದೆಯೇ?

ಶ್ರೀ ಎಂ. ಪಿ. ಪಾಟೀಲ್.—ಇಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಜೋಡಿದಾರರುಗಳು ರೈತರ ಹೆಸರನ್ನು ಬರೆಯುವುದನ್ನು ಬಿಟ್ಟರೆ ರೈತರಿಗೆ ಯಾವುದಾದರೂ ರೀತಿಯಲ್ಲಿ Relief ಕೊಡುವುದಕ್ಕೆ ಅಥವಾ ಬರೆದಿರುವ ಲೆಖ್ಖ ತಪ್ಪೆಂದು ತಿಳಿಸುವುದಕ್ಕೆ ಏನಾದರೂ ಏರ್ಪಾಡು ಮಾಡಿದ್ದೀರಾ?

ಶ್ರೀ ಎಂ. ಪಿ. ಪಾಟೀಲ್.—ಕಾನೂನು ಪ್ರಕಾರ ಯಾವರೀತಿ ಲೆಕ್ಕ ಬರೆಯ ಬೇಕೋ ಆರೀತಿ ಬರೆಯದೆ ಇದ್ದರೆ ಅಂಥ ಸಂದರ್ಭಗಳನ್ನು ನಮ್ಮ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ರೈತರ ತಿಳಿವಳಿಕೆಯ ಬಗ್ಗೆ 14-15ನೆಯ ನಂಬರ್ ಲೆಕ್ಕವನ್ನು ಕಚೇರಿಯಲ್ಲಾಗಲೀ, ಜೋಡಿಗ್ರಾಮದಲ್ಲಾಗಲಿ ಪ್ರಕಟಣೆ ಮಾಡುತ್ತೀರಾ?

ಶ್ರೀ ಎಂ. ಪಿ. ಪಾಟೀಲ್.—ಅದಕ್ಕೆ ಅವಶ್ಯಕತೆ ಇಲ್ಲ. ಯಾರಿಗಾದರೂ ನೋಡುವುದರ ಅವಶ್ಯಕತೆಯಿದ್ದರೆ, ಅವರಿಗೆ ನೋಡುವುದಕ್ಕೆ ಅವಕಾಶ ಕೊಡುತ್ತೇವೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಈ ಲೆಕ್ಕಗಳು ಯಾರ ಹತ್ತಿರ ಇವೆಯೆಂಬುದೇ ಗೊತ್ತಾಗುವುದಿಲ್ಲ. ರೈತರಿಗೆ ಇದನ್ನು ತಿಳಿದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಂ. ಪಿ. ಪಾಟೀಲ್.—ಸಂಬಂಧಪಟ್ಟವರಿಗೆ ನೋಟೀಸ್ ಕೊಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಜೋಡಿದಾರರು ಯಾರ ಸಲಹೆಯಮೇರೆಗೆ ಲೆಕ್ಕ ಬರೆಯತ್ತಾರೆ?

ಶ್ರೀ ಎಂ. ಪಿ. ಪಾಟೀಲ್.—ಅದು ನನಗೇ ಗೊತ್ತಿಲ್ಲ ಆದರೆ ನಮ್ಮ ಸ್ಟಾಫ್ ಬರೆಯ ಬೇಕಾದರೆ ಯಾವ ಯಾವ ಮೂಲದಿಂದ ಸಮಾಚಾರ ತರಿಸಿಕೊಳ್ಳ ಬೇಕೋ ಅದನ್ನು ತರಿಸಿಕೊಂಡು ಬರೆಯುತ್ತಾರೆ.

ಶ್ರೀ ಎ. ಮುನಿಯಪ್ಪ.—ಗೊತ್ತಿಲ್ಲ ಎಂದು ಹೇಳಿದಿರಿ. ಯಾರ ಸಲಹೆಯನ್ನಾದರೂ ಕೇಳಿ ಬರೆಯ ಬೇಕೆಂದು ಸೂಚನೆ ಕೊಟ್ಟಿಲ್ಲವೇ?

ಶ್ರೀ ಎಂ. ಪಿ. ಪಾಟೀಲ್.—ಲೆಕ್ಕ ಬರೆದು ಕೊಡಬೇಕು; ಅಷ್ಟೇ ಇರುವುದು ರೂಲ್ಸ್‌ನಲ್ಲಿ.

ಶ್ರೀ ಎ. ಮುನಿಯಪ್ಪ.—ಪಟೇಲ್ ಶ್ಯಾನುಭೋಗರುಗಳು ತಮಗೆ ಬೇಕಾಗಿರದ ರೈತರುಗಳ ಹೆಸರುಗಳನ್ನು ಬಿಟ್ಟು ಬೇರೆಯವರ ಹೆಸರನ್ನು ಬರೆಯುತ್ತಿರುವುದು ಗೊತ್ತಿದೆಯೇ?

ಅಧ್ಯಕ್ಷರು.—ಆ ಪ್ರಶ್ನೆ ಈ ಸಂದರ್ಭದಲ್ಲಿ ಬರುವುದಿಲ್ಲ.

ಶ್ರೀ ಬಿ. ಇ. ರಾಮಯ್ಯ.—ಜೋಡಿದಾರರುಗಳು ರೈತರ ಹಕ್ಕನ್ನು ತಪ್ಪಿಸಿ ತಾವೇ ಮಾಡುತ್ತಿರುವುದಾಗಿ